

# ದೈತ್ಯ ಆಲ!

ಕೋಲ್ಕತ್ತಾದ ಹೌರಾ ಸಮೀಪವಿರುವ ಜಗದೀಶ ಚಂದ್ರ ಬೋಸ್ ಇಂಡಿಯನ್ ಬೊಟಾನಿಕಲ್ ಗಾರ್ಡನ್‌ನಲ್ಲಿ ಆಲದ ಮರವೊಂದಿದೆ. ಇದು ಅಂತಿಂಥ ಸಾಮಾನ್ಯ ಮರವಲ್ಲ. 'ದಿ ಗ್ರೇಟ್ ಬ್ಯಾನಿಯನ್' ಎಂದು ಕರೆಯಲ್ಪಡುವ ಈ ಮರವು ಇಡೀ ಪ್ರಪಂಚದಲ್ಲೇ ಅತ್ಯಧಿಕ ವಿಸ್ತೀರ್ಣದ ಮರವೆಂಬ ಹೆಗ್ಗಳಿಕೆ ಹೊಂದಿದೆ. ಮೋರೇಸಿ ಕುಟುಂಬಕ್ಕೆ ಸೇರಿರುವ ಈ ಮರದ ವೈಜ್ಞಾನಿಕ ಹೆಸರು ಫಿಕಸ್ ಬೆಂಗಾಲೆನ್ಸಿಸ್. ಇದು ಸುಮಾರು 14,500 ಚದರ ಮೀಟರ್(1.5 ಹೆಕ್ಟೇರ್‌ಅಥವಾ 4 ಎಕರೆಗಳು)ನಷ್ಟು ಜಾಗವನ್ನು ಆಕ್ರಮಿಸಿದೆ. ಈ ಮರವನ್ನು ಯಾವಾಗ ನೆಟ್ಟಿರಬಹುದೆಂಬ ಇತಿಹಾಸ ಲಭ್ಯವಿಲ್ಲ, ಸುಮಾರು 200 ರಿಂದ 250 ವರ್ಷಗಳಷ್ಟು ಹಳೆಯದಿರಬಹುದೆಂದು ಅಂದಾಜಿಸಲಾಗಿದೆ. ಹತ್ತೊಂಬತ್ತನೆಯ ಶತಮಾನದ ಅನೇಕ ಪ್ರವಾಸಿ ಗ್ರಂಥಗಳಲ್ಲಿ ಈ ಪ್ರೇಕ್ಷಣೀಯ ಮರದ ಬಗ್ಗೆ ಬೇಕಾದಷ್ಟು ಉಲ್ಲೇಖಗಳಿವೆ. ಕೊಂಬೆಗಳಿಂದ ಹುಟ್ಟಿರುವ ಗಾಳಿ ಬೇರು(ಏರಿಯಲ್ ರೂಟ್ಸ್) ಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ನೆಲದಿಂದ ಲಂಬವಾಗಿ ಚಾಚಿಕೊಂಡಿರುವುದರಿಂದ ಬಹಳಷ್ಟು ಕಾಂಡಗಳು ಇರುವಂತೆ ಭಾಸವಾಗುತ್ತದೆ. ಅಚ್ಚರಿಯ ವಿಷಯವೇನೆಂದರೆ 1864 ಮತ್ತು 1867 ರಲ್ಲಿ ಬೀಸಿದ ಪ್ರಬಲ ಚಂಡಮಾರುತಕ್ಕೆ ಈ ಮರದ ಪ್ರಧಾನ ಕೊಂಬೆಗಳು ಮುರಿದು ಹೋಗಿದ್ದರೂ ಇದು ಬದುಕುಳಿದಿದೆ. ಅದೂ ಅಲ್ಲದೆ ಮಿಂಚಿನ ವಿದ್ಯುತ್ಪ್ರವಾಹಕ್ಕೆ ಸಿಲುಕಿ ಮುಖ್ಯ ಕಾಂಡವು ಕೊಳೆತಿದ್ದರಿಂದ 1925 ರಲ್ಲಿ ಇದನ್ನು ತೆಗೆದು ಹಾಕಲಾಗಿದೆ. ಈ ಮರದ ಈಗಿನ ಶಿಖರದ ಪರಿಧಿಯು ಸುಮಾರು ಒಂದು ಕಿಲೋ ಮೀಟರ್ ನಷ್ಟಿದೆ. ಎತ್ತರದ ಕೊಂಬೆಯು 25 ಮೀಟರ್ ನಷ್ಟು ಅಳತೆಯುಳ್ಳದ್ದಾಗಿದೆ ಮತ್ತು ಸುಮಾರು 3772 ನಷ್ಟು ಗಾಳಿ ಬೇರುಗಳು ನೆಲವನ್ನು ಮುಟ್ಟಿವೆ. ಅದ್ಭುತವಾದ ಈ ಮರವನ್ನು ನೋಡಲು ದೇಶ ವಿದೇಶಗಳಿಂದಲೂ ಪ್ರವಾಸಿಗರು ಧಾವಿಸುತ್ತಾರೆ

■ ವಿದ್ಯಾ ವಿ. ಹಾಲಭಾವಿ

